**LAC 1-21** **PW :1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ S S G, ವಕೀಲರಿಂದಃ**

2. ನಾನು ಒಕ್ಕಲುತನ ಮಾಡುತ್ತೇನೆ. ನಾನೇ ಅರ್ಜಿಗೆ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದೇನೆ. ಹೆಚ್ಚಿನ ಪರಿಹಾರಗೋಸ್ಕರ ಕೇಸ ಮಾಡಿದ್ದೇನೆ. ನನ್ನ ಜಮೀನು ರೇಲ್ವೆ ಗೆ ಹೋಗಿದೆ. ಆ ಕಾರಣದಿಂದ ಹೆಚ್ಚಿನ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೇನೆ. 2 ನೇ ಎದುರುದಾರರು ಬೈಪಾಸ ರೇಲ್ವೆ ಟ್ರ್ಯಾಕಗೆ ನಮ್ಮ ಜಮೀನು ತೆಗೆದುಕೊಂಡಿದ್ದಾರೆ ಅಂದರೆ ಸರಿ. ಜಮೀನು ಯಾವಾಗ ಸ್ವಾಧೀನಪಡಿಸಿಕೊಂಡಿದ್ದಾರೆಂದು ನೆನಪಿಲ್ಲ. ಕೇಶ್ವಾಪೂರ ಗ್ರಾಮದ ಸ ನಂಃ 49/1 ರ ಹಾಗೂ 49/2 ರ ಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಅದರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ನಾನು ಎಸ್ ಎಲ್ ಎ ಓ ಗೆ ತಕರಾರು ಕೊಟ್ಟಿದ್ದೇನೆ. ಪರಿಹಾರ ಕೊಟ್ಟಿದ್ದು ಸರಿ ಇಲ್ಲ, ಹೆಚ್ಚಿನ ಪರಿಹಾರಗೋಸ್ಕರಕ್ಕೆ ತಕರಾರು ಸಲ್ಲಿಸಿದ್ದೇನೆ. ಭೂ-ಸ್ವಾಧೀನ ಅಧಿಕಾರಿ 5 ವರ್ಷಗಳ ಹೆಚ್ಚಿನ ಖರೀದಿ ಪತ್ರಗಳ ದರವನ್ನು ಪರಿಗಣಿಸಿ ಹೆಚ್ಚಿನ ಪರಿಹಾರವನ್ನು ನೀಡಿದ್ದಾರೆ ಅಂದರೆ ಸರಿಯಲ್ಲ. ನಮಗೆ ಪರಿಹಾರ ಕಡಿಮೆಯಾಗಿದೆ ಎಂದು ಅರ್ಜಿ ನೀಡಿದ್ದೇನೆ. ಭೂ-ಸ್ವಾಧೀನ ಕಾಯ್ದೆ ಕಲಂ -18 ರ ಅಡಿಯಲ್ಲಿ ಯಾವಾಗ ಅರ್ಜಿ ಸಲ್ಲಿಸಿದ್ದೇನೆಂದು ನೆನಪಿಲ್ಲ. ಪರಿಹಾರದ ಹಣವನ್ನು ನಾನು ತೆಗೆದುಕೊಂಡಿದ್ದೇನೆ. ಪರಿಹಾರ ಸರಿ ಇಲ್ಲವೆಂದು ಪರಿಹಾರದ ಹಣವನ್ನು ತೆಗೆದುಕೊಂಡಿದ್ದೇನೆ. ನಾವು ಭೂ-ಸ್ವಾಧೀನ ಅಧಿಕಾರಿ ಪರಿಹಾರ ಕೊಟ್ಟಿದ್ದು ಸರಿಯಾಗಿರುವುದರಿಂದ ನಾವು ಪರಿಹಾರ ಸ್ವೀಕಾರ ಮಾಡಿದ್ದೇವೆ ಅಂದರೆ ಸರಿಯಲ್ಲ. ಭೂ-ಸ್ವಾಧೀನ ಮಾಡಿಕೊಳ್ಳುವಾಗ ತಕರಾರು ಕೊಟ್ಟಿದ್ದೇನೆ. ಎಡಿ ಎಲ್ ಆರ್ ಹಾಗೂ ಭೂ-ಸ್ವಾಧೀನ ಅಧಿಕಾರಿ ಗಳು ನಮ್ಮ ಸಮಕ್ಷಮ ಅಳತೆ ಮಾಡಿ ಸ್ವಾಧೀನಪಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ನಮ್ಮ ಸಮಕ್ಷಮ ಅಳತೆ ಮಾಡಿ ಕಬ್ಜೆ ತೆಗೆದುಕೊಂಡಿದ್ದಾರೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಅಳತೆ ಮಾಡಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳು ಭೂಮಿಯನ್ನು ಕಳೆದುಕೊಂಡವರನ್ನು ಕರೆಸಿ, ಸಭೆ ಮಾಡಿ ಭೂಮಿ ದರವನ್ನು ನಿಗದಿಪಡಿಸಿದ್ದಾರೆ ಅಂದರೆ ಸರಿಯಲ್ಲ. ಸಭೆ ನಡವಳಿ ಪ್ರಕಾರ ನೋಟಿಸು ನೀಡಿದ್ದಾರೆ ಅಂದರೆ ಸರಿಯಲ್ಲ.

**LAC 1-21** **PW :1**

ನಾವು ಒಪ್ಪಿಕೊಂಡ ಪ್ರಕಾರ ದರವನ್ನು ನಿಗಿಪಡಿಸಿದ್ದಾರೆ ಅಂದರೆ ಸರಿಯಲ್ಲ. ನಮ್ಮ ಜಮೀನು ಹುಬ್ಬಳ್ಳಿಯ ನಗರ ವ್ಯಾಪ್ತಿಯಲ್ಲಿ ಬರುತ್ತದೆ. ನಗರ ವ್ಯಾಪ್ತಿಯಲ್ಲಿ ಬರುವ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ಆ ಕಾಲಕ್ಕೆ ನಮ್ಮ ಜಮೀನು ಹುಬ್ಬಳ್ಳಿ ನಗರ ವ್ಯಾಪ್ತಿಯಲ್ಲಿ ಬರುತ್ತಿರಲಿಲ್ಲ ಅಂದರೆ ಸರಿಯಲ್ಲ. ನಮ್ಮ ಜಮೀನು ಹುಬ್ಬಳ್ಳಿಯಿಂದ 10-12 ಕಿಮೀ ದೂರವಿರುವುದರಿಂದ ಅಲ್ಲಿ ಯಾವುದೇ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿ ಇಲ್ಲ ಅಂದರೆ ಸರಿಯಲ್ಲ. ಭೂ-ಸ್ವಾಧೀನಪಡಿಸಿಕೊಳ್ಳುವ ಕಾಲಕ್ಕೆ ಸುತ್ತಮುತ್ತ ಕೃಷಿ ಭೂಮಿ ಇತ್ತು ಅಂದರೆ ಸರಿಯಲ್ಲ. ಪ್ಲಾಟ ಆದ ಬಗ್ಗೆ ದಾಖಲೆ ಹಾಜರಪಡಿಸಿರುವ ಬಗ್ಗೆ ಗೊತ್ತಿಲ್ಲ. ನಮ್ಮ ಜಮೀನು ಸುತ್ತಮುತ್ತ ಕಾಲೇಜ – ಹೊಟೇಲ ಇರಲಿಲ್ಲ ಅಂದರೆ ಸರಿಯಲ್ಲ. ಕಾಲೇಜ – ಹೊಟೇಲ ಗಳು ನಮ್ಮ ಜಮೀನು ಕಡೆಗೆ ಇಲ್ಲ. ಗೋಕುಲ ರೋಡ ಕಡೆಗೆ ಇವೆ ಅಂದರೆ ಸರಿಯಲ್ಲ. ಗೋಕುಲ ರೋಡ ಹಾಗೂ ವಿದ್ಯಾನಗರಗಳಿಂದ ನಮ್ಮ ಜಮೀನು 5 ಕಿಮೀ ದೂರದಲ್ಲಿದೆ. ಈ ಮಾತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಕಾಲಕ್ಕೆ ಆಕ್ಸಫರ್ಡ ಕಾಲೇಜ ಇತ್ತು. ಆ ಕಾಲಕ್ಕೆ ಕಾಲೇಜ – ಹೊಟೇಲ ಇದ್ದವು ಆದರೆ ಹೆಸರುಗಳನ್ನು ಹೇಳಲಾಗುವುದಿಲ್ಲ. ಕಾಲೇಜ – ಹೊಟೇಲ, ವಾಣಿಜ್ಯ ಮಳಿಗೆ ಇರಲಿಲ್ಲ ಆ ಕಾರಣದಿಂದ ಅವುಗಳ ಹೆಸರು ಹೇಳಲು ಬರುವುದಿಲ್ಲ ಅಂದರೆ ಸರಿಯಲ್ಲ. ಕಾಲೇಜ – ಹೊಟೇಲ ಇದ್ದ ಬಗ್ಗೆ ದಾಖಲೆ ಹಾಜರಪಡಿಸಿರಬಹುದು, ಆದರೆ ವಕೀಲರಿಗೆ ಗೊತ್ತು. ಕೃಷಿ ಭೂಮಿ ದರ ನೋಡಿಕೊಂಡು ಭೂ-ಸ್ವಾಧೀನ ಅಧಿಕಾರಿ ದರ ನಿಗದಿಪಡಿಸಿದ್ದಾರೆ ಅಂದರೆ ಸರಿಯಲ್ಲ. ಭೂ-ಸ್ವಾಧೀನ ಅಧಿಕಾರಿ ಹೆಚ್ಚಿನ ಪರಿಹಾರವನ್ನು ಆ ಕಾಲಕ್ಕೆ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಆ ಕಾಲಕ್ಕೆ ಹೆಚ್ಚಿನ ಪರಿಹಾರ ನೀಡಿದ್ದರೂ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಹಾಜರಪಡಿಸಿದ ದಾಖಲೆಗಳು ಉಣಕಲ್ ಗ್ರಾಮದ್ದು ಅಂದರೆ ನೋಡಿಲ್ಲ. ನಿಪಿ.5 ಹಾಗೂ 6 ಗಳು ಗೋಕುಲ ರೋಡಿಗೆ ಸಂಬಂಧಪಟ್ಟ ಜಮೀನುಗಳು ಅಂದರೆ ನೆನಪಿಲ್ಲ. ನಿಪಿ.5 ಹಾಗೂ 6 ಗಳು ನಿಪಿ.3 ಹಾಗೂ 4 ರ ಅಪೀಲ್ ಅಂದರೆ ಮಾಹಿತಿ ಇಲ್ಲ. ನಾನು ಹಾಜರಪಡಿಸಿದ ಖರೀದಿ ಪತ್ರಗಳು ನಿಪಿ.7 ರಿಂದ 9 ಗಳು ಕೃಷ್ಟಿ ಭೂಮಿಗಳಿಗೆ ಸಂಬಂಧಪಟ್ಟಿದ್ದು ಅಂದರೆ ಸರಿಯಲ್ಲ. ನಾನು ಹಾಜರಪಡಿಸಿದ ದಾಖಲೆಗಳು ಉಕಣಲ್ ಹಾಗೂ ಉಣಕಲ್ ರೋಡಿಗೆ ಸಂಬಂಧಪಟ್ಟಿದ್ದು ಅಂದರೆ ಸರಿ. ನಮ್ಮ ಜಮೀನು ಸುತ್ತಮುತ್ತ ಇರುವ ಜಮೀನುಗಳ ಖರೀದಿ ಪತ್ರ ಹಾಜರಪಡಿಸಿರಬಹುದು, ಆದರೆ ಮಾಹಿತಿ ಇಲ್ಲ.

**LAC 1-21** **PW :1**

**ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.